ESTD : No. JRB/Cell.II/69/Regn-4876/77-78
Date : 09-12-1977

✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

## THE BANGALORE CITY DIST. CO-OPERATIVE UNION LTD.,

' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018
E-mail: bcdcu1977@gmail.com

**ಹೆಚ್.ಟಿ. ನಾಗೇಶ್** – ಅಧ್ಯಕ್ಷರು
**ಚಾಮರಾಜು ಕೆ.ಎಸ್.** – ಉಪಾಧ್ಯಕ್ಷರು
**ವೆಂಕಟೇಶ್ ಎಂ.** – ಖಜಾಂಚಿ

---

## ಪ್ರಕಟಣೆಗಾಗಿ

**ಬೆಂಗಳೂರು ಉತ್ತರ ತಾಲ್ಲೂಕಿನ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ತರಬೇತಿ ಕಾರ್ಯಕ್ರಮ**

ಬೆಂಗಳೂರು :– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ., ಬೆಂಗಳೂರು, ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ., ಬೆಂಗಳೂರು ದಿನಾಂಕ: 15–07–2024 ರಂದು **ಬೆಂಗಳೂರು ಉತ್ತರ ತಾಲ್ಲೂಕಿನ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ** ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಸೋಮವಾರ ಬೀಜ ಸಂಸ್ಕರಣ ಕೇಂದ್ರ ಬಮೂಲ್ ರಾಜಕುಂಟೆ ಬೆಂಗಳೂರು ಉತ್ತರ ತಾಲ್ಲೂಕು ಇಲ್ಲಿ ಏರ್ಪಡಿಸಲಾಗಿತ್ತು.

ಸಮಾರಂಭದ ಉದ್ಘಾಟನೆಯನ್ನು ಬೆಂಗಳೂರು ಸಹಕಾರು ಹಾಲು ಒಕ್ಕೂಟ ನಿ., ಇದರ ನಿರ್ದೇಶಕರಾದ ಶ್ರೀ ಕೆ.ಎಸ್. ಕೇಶವಮೂರ್ತಿ ಇವರು ಮಾತನಾಡುತ್ತಾ, ಸಹಕಾರ ಕ್ಷೇತ್ರದಲ್ಲಿ ಕಾಲಕ್ಕೆ ತಕ್ಕಂತೆ ಬದಲಾದಂತಹ ಇತ್ತಿಚ್ಚೀನ ಕಾಯ್ದೆ ಕಾನೂನು ತಿದ್ದುಪಡಿಗಳ ಬಗ್ಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ವಿವಿಧ ರೀತಿಯ ತರಬೇತಿಗಳನ್ನು ನೀಡುತ್ತಾ ಬಂದಿದ್ದು ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರುಗಳು ಈ ತರಬೇತಿಯಲ್ಲಿ ಹಾಜರಾಗಿ ಇದರ ಸದುಪಯೋಗ ಪಡಿಸಿಕೊಂಡು ಸಂಘಗಳನ್ನು ಉತ್ತಮವಾಗಿ ಬೆಳೆಸಲು ಸಹಾಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಟಿ. ನಾಗೇಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಸಹಕಾರ ಸಂಘಗಳ ಮಾತೃ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ತನ್ನ ನೇತೃತ್ವದ 30 ಜಿಲ್ಲಾ ಸಹಕಾರ ಒಕ್ಕೂಟಗಳ ಮೂಲಕ ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರವನ್ನು ಮಾಡುತ್ತಿದೆ. ಇದೇ ರೀತಿ ಬೆಂಗಳೂರು ಜಿಲ್ಲಾ ಸಹಕಾರ ಒಕ್ಕೂಟ ನಿರಂತರವಾಗಿ ಪರಣಾಮಕಾರಿಯಾಗಿ ಸಹಕಾರ ತರಬೇತಿ ನೀಡುತ್ತಿದೆ ಎಂದರು.

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಶ್ರೀ ವಿಜಯ್‌ಕುಮಾರ್ ಸಹಕಾರ ತರಬೇತಿ ಕುರಿತು ಮಾತನಾಡಿದರು. ಪ್ರಧಾನ ವ್ಯವಸ್ಥಾಪಕರು ಶೇಕರಣೆ ಮತ್ತು ತಾಂತ್ರಿಕ ಬೆಂಗಳೂರು ಸಹಕಾರ ಒಕ್ಕೂಟ ನಿ., ಡಾ॥ ಎನ್. ಶಿವಶಂಕರ್, ಉಪವ್ಯವಸ್ಥಾಪಕರು ಬೆಂಗಳೂರು ಉತ್ತರ ತಾಲ್ಲೂಕು ಶಿಬಿರ ಕಛೇರಿ ಬಮೂಲ್ ಶ್ರೀ ಪ್ರಸನ್ನ ವಿ.ಪಿ, ನಿರ್ದೇಶಕರಾದ ಶ್ರೀ ತಿಮ್ಮರಾಯಗೌಡ, ಉಪಸ್ಥಿತರಿದ್ದರು. ಪ್ರಧಾನ ವ್ಯವಸ್ಥಾಪಕರು ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ., ಡಾ॥ ಗಂಗಯ್ಯ ಎಂ. ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರುಗಳ ಕರ್ತವ್ಯ ಮತು ಜವಾಬ್ದಾರಿಗಳ ಕುರಿತು ಉಪನ್ಯಾಸವನ್ನು ನೀಡಿದರು ನಂತರ ರಾಜ್ಯ ತರಬೇತಿದಾರರು ಬೆಂಗಳೂರು ಶ್ರೀ ಸ್ಟಾರ್ ವೆಂಕಟೇಶ್ ಇವರು ವ್ಯಕ್ತಿತ್ವ ವಿಕಸನ ಮತ್ತು ಮಾನಸಿಕ ಒತ್ತಡಗಳ ನಿರ್ವಹಣೆ ಕುರಿತು ಉಪನ್ಯಾಸವನ್ನು ನೀಡಿದರು. ಶ್ರೀಮತಿ ಲಕ್ಷ್ಮೀ ಸಿ.ಎಂ ಸ್ವಾಗತಿಸಿ ಹಾಗೂ ವಂದಿಸಿದರು.

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ


ನಂದಿನಿ
ಬಮೂಲ್
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು
ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ., ಬೆಂಗಳೂರು
ಹಾಗೂ
ಬೆಂಗಳೂರು
ಹಾಲು
ಬೆಂಗಳೂರು